ಅ) ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನ ಈ ಕೆಳಕಂಡ ಖಾಸಗಿ ಪ್ರವಾಸೋದ್ಯಮ ಯೋಜನೆಗಳಿಗೆ ಪ್ರವಾಸೋದ್ಯಮ ಇಲಾಖೆ ಸಹಾಯಧನ ನೀಡಿದೆ:–

1. ಪ್ರಭು ಗ್ರೂಪ್ ಆಫ್ ಹೋಟೆಲ್, ಹೊನ್ನಾವರ.
2. ಹೋಟೆಲ್ ಗುಡ್ ಲಕ್, ಹೊನ್ನಾವರ.
3. ಹೋಟೆಲ್ ಸಿದ್ದಾರ್ಥ, ಹೊನ್ನಾವರ.

ಆ) ಅನುದಾನ ಲಭ್ಯತೆ ಆಧಾರದ ಮೇರೆಗೆ ಸಹಾಯಧನ ನೀಡಲು ಕ್ರಮ ಕೈಗೊಳ್ಳಲಾಗುವುದು. ಸಹಾಯಧನವನ್ನು ನೀಡುವ ಬಗ್ಗೆ ಯಾವುದೇ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

840(182) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಸರ್ಕಾರಿ ಕೈಗಾರಿಕಾ ತರಬೇತಿ (ಉದ್ಯೋಗ ಮತ್ತು ತರಬೇತಿ ಇಲಾಖೆ), ಹೊನ್ನಾವರದ ಜಮೀನು ಸಾರ್ವಜನಿಕರಿಂದ ಅತಿಕ್ರಮಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2. ಅತಿಕ್ರಮಣವಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?
3. ಅತಿಕ್ರಮಣ ತಡೆಗಟ್ಟಲು ಸರ್ಕಾರ ಸಂಬಂಧಿಸಿದ ಇಲಾಖೆಗೆ ಸೂಚಿಸಿದೆಯೇ?
4. ಭಟ್ಕಳ ತಾಲ್ಲೂಕಿನಲ್ಲಿ ಹೊಸದಾಗಿ ಕೈ.ತ.ಸಂಸ್ಥೆ (ಐಟಿಐ) ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ಹಾಗೂ ಈ ಯೋಜನೆ ಯಾವ ಹಂತದಲ್ಲಿದೆ? ಯಾವಾಗ ಪ್ರಾರಂಭಿಸಲಾಗುವುದು?
5. 2003–04ನೇ ಸಾಲಿನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಕಾರವಾರದಲ್ಲಿ ನಡೆಸಿದ ಜಿಲ್ಲಾ ಮಟ್ಟದ ತರಬೇತಿದಾರರ ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯದೆ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಲ್ಪಿಸಿರುವುದು ನಿಜವೇ?
6. ಇದರಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸರ್ಕಾರದ ನಿಲುವೇನು ಹಾಗೂ ಕೌನ್ಸಿಲಿಂಗ್ ಮೂಲಕ ಅರ್ಹರಿಗೆ ಪ್ರವೇಶ ಕಲ್ಪಿಸದೇ ಇರುವ ಕುರಿತು ಸರ್ಕಾರ ತನಿಖೆ ಮಾಡಲಾಗುವುದೇ?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

1. ಇಲ್ಲ.
2. ವರದಿಯೊಂದನ್ನು ತರಿಸಿಕೊಂಡು ಸತ್ಯವೆಂದು ಕಂಡುಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.
3. ಮೇಲಿನ (1)ರಲ್ಲಿ ತಿಳಿಸಿದ ಉತ್ತರದಿಂದ ಅನ್ವಯಿಸುವುದಿಲ್ಲ.
4. ಇತ್ತೀಚೆಗಷ್ಟೆ ಪ್ರಸ್ತಾವನೆ ಬಂದಿದ್ದು, ಜಮೀನು ಹಾಗೂ ಹಣಕಾಸು ಲಭ್ಯತೆಯನ್ನು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು.
5. ಸಿ.ಇ.ಟಿ. ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶ ಕಲ್ಪಿಸಲಾಗುತ್ತಿದೆ. ಆದ್ದರಿಂದ ಇಂತಹ ನ್ಯೂನತೆಗಳು ಉದ್ಭವಿಸುವುದಿಲ್ಲ.
6. ಅನ್ವಯಿಸುವುದಿಲ್ಲ.

841(993) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಟ್ಕಳ ತಾಲ್ಲೂಕಿನ ತೆಂಗಿನಗುಂಡಿ ಬಂದರಿನಲ್ಲಿ ಹಿನ್ನೀರು ಯೋಜನೆಯ ಕಾಮಗಾರಿ ಕೆಲಸ ನಡೆಯುತ್ತಿರುವುದು ನಿಜವೇ?